ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
KARNATAKA STATE TOURISM DEVELOPMENT CORPORATION LTD.
(ಕರ್ನಾಟಕ ಸರ್ಕಾರದ ಒಂದು ಉದ್ಯಮ) (A Govt. of Karnataka Undertaking)

ಕಾರ್ಯನಿರ್ವಾಹಕ ಕಛೇರಿ : ನೆಲಮಹಡಿ, ಬಿ.ಎಂ.ಟಿ.ಸಿ. ಯಶವಂತಪುರ,
ಟಿ.ಟಿ.ಎಂ.ಸಿ. – ಬಸ್ ನಿಲ್ದಾಣ, ಯಶವಂತಪುರ ವೃತ್ತ
ಬೆಂಗಳೂರು – 560 022.

Corporate Office : Ground Floor, B.M.T.C.
Yeshwanthpur, T.T.M.C - Bus Stand,
Yeshwanthpur Circle, Bangalore - 560 022.

ಸಂಖ್ಯೆ: ಕರಾಪ್ರಅನಿ/23/ಆಡಳಿತ/2017–18/281 /18–19 ದಿನಾಂಕ:19.05.2018

## ಅಧಿಸೂಚನೆ

ವಿಷಯ: ನಿಗಮದಲ್ಲಿ ಅವಶ್ಯಕತೆ ಇರುವ ಚಾಲಕ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಸಂಬಂಧ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ:
1. ದಿನಾಂಕ: 30.06.2017 ರಂದು ನಡೆದ ನಿಗಮದ 202ನೇ ನಿರ್ದೇಶಕ ಮಂಡಳಿಯ ತೀರ್ಮಾನದಂತೆ,
2. ಅಧಿಸೂಚನೆ ಸಂಖ್ಯೆ: ಕರಾಪ್ರಅನಿ/23/ಆಡಳಿತ/17–18/666, ದಿನಾಂಕ: 29.07.2017 ಹಾಗೂ ಪತ್ರಿಕಾ ಪ್ರಕಟಣೆ ದಿನಾಂಕ: 31.07.2017.
3. ಅಧಿಸೂಚನೆ ಸಂಖ್ಯೆ: ಕರಾಪ್ರಅನಿ/23/ಆಡಳಿತ/2017–18/1572,ದಿನಾಂಕ: 06.01.2018. ಹಾಗೂ ಪತ್ರಿಕಾ ಪ್ರಕಟಣೆ ದಿನಾಂಕ: 09.01.2018.
4. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಇವರ ಪತ್ರ ಸಂಖ್ಯೆ: ಬೆಮಸಾಸಂ/ಕೇಕ/ನೇಮಕ/ಆರ್1/6159/2017–18, ದಿನಾಂಕ:12.03.2018.

~~~~~~

ನಿಗಮಕ್ಕೆ ಅವಶ್ಯಕತೆ ಇರುವ ವಿವಿಧ 32 ವೃಂದದ 113 ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳುವ ಸಂಬಂಧ ಉಲ್ಲೇಖ(1)ರ ನಿಗಮದ ನಿರ್ದೇಶಕ ಮಂಡಳಿಯ ತೀರ್ಮಾನದಂತೆ, ಉಲ್ಲೇಖ(2)ರನ್ವಯ ಅಧಿಸೂಚನೆಯನ್ನು ಹೊರಡಿಸಿ, ಪತ್ರಿಕಾ ಪ್ರಕಟಣೆ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ಅದರಂತೆ ಅಭ್ಯರ್ಥಿಗಳ ವಿದ್ಯಾರ್ಹತೆ, ಅನುಭವ ಹಾಗೂ ಪರಿಣತಿಯನ್ನು ಆಧರಿಸಿ, ಅವರು ಪಡೆಯುವ ಮೌಲ್ಯಾಂಕಗಳು ಹಾಗೂ ಸಂದರ್ಶನದಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಪ್ರತಿ 1 ಹುದ್ದೆಗೆ 5 ಅಭ್ಯರ್ಥಿಗಳ ಅನುಪಾತದಲ್ಲಿ ಅಭ್ಯರ್ಥಿಯನ್ನು ಪರಿಗಣಿಸಲಾಗುವುದಾಗಿ ಅಧಿಸೂಚನೆಯಲ್ಲಿ ತಿಳಿಸಲಾಗಿತ್ತು. ಇದರನ್ವಯ ಪ್ರತಿ ಹುದ್ದೆಗಳಿಗೆ ನಿಗಧಿತ ಅವಧಿಯಲ್ಲಿ ಬಂದಿರುವ ಅರ್ಜಿಗಳ ಮೌಲ್ಯಮಾಪನ ಕೈಗೊಂಡಿದ್ದು, ಅವಶ್ಯಕ ಅರ್ಹ ಅಭ್ಯರ್ಥಿಗಳು ಪೂರ್ಣ ಪ್ರಮಾಣದಲ್ಲಿ ಲಭ್ಯವಾಗದ ಕಾರಣ, ಹಿಂದಿನ ಅಧಿಸೂಚನೆಯಲ್ಲಿನ ಮಾನದಂಡಗಳಲ್ಲಿ ಸಡಿಲಿಕೆಯನ್ನು ತಂದು, ಪ್ರಥಮ ಹಂತದಲ್ಲಿ ಅತ್ಯವಶ್ಯಕ 57 ಹುದ್ದೆಗಳಿಗೆ ನೇರ ಸಂದರ್ಶನದ ಮೂಲಕ ನೇಮಕಾತಿ ಕೈಗೊಳ್ಳಲು ತೀರ್ಮಾನಿಸಿ, ಉಲ್ಲೇಖ(3) ರಂತೆ ಅಧಿಸೂಚನೆಯನ್ನು ಹಾಗೂ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಅದರಂತೆ, ಚಾಲಕ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ ಹಾಗೂ ಇತರೆ ಮಾನದಂಡಗಳನ್ವಯ, ದಿನಾಂಕ: 18.01.2018 ರಂದು ಚಾಲಕ ಹುದ್ದೆಯ ಸಂದರ್ಶನಕ್ಕೆ ಬಂದಿದ್ದ ಅಭ್ಯರ್ಥಿಗಳ ಪೈಕಿ ಅರ್ಹ 55 ಅಭ್ಯರ್ಥಿಗಳಿಂದ ಸ್ವ ವಿವರ ನಮೂನೆಯನ್ನು ಸ್ವೀಕರಿಸಲಾಗಿರುತ್ತದೆ. ಅಧಿಸೂಚನೆಯಲ್ಲಿ ತಿಳಿಸಿರುವಂತೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯವರಿಂದ ದಿನಾಂಕ: 03.03.2018 ರಂದು ಸದರಿ ಅಭ್ಯರ್ಥಿಗಳಿಗೆ ಚಾಲನಾ ಪರೀಕ್ಷೆ ನಡೆಸಲು ತೀರ್ಮಾನಿಸಿ, ಸದರಿ 55 ಅಭ್ಯರ್ಥಿಗಳಿಗೆ ಸದರಿ ದಿನಾಂಕದಂದು ನಡೆಯುವ ಚಾಲನಾ ಪರೀಕ್ಷೆಗೆ ಹಾಜರಾಗುವಂತೆ ಸೂಚಿಸಲಾಗಿರುತ್ತದೆ.

ಅದರಂತೆ, ದಿನಾಂಕ:03.03.2018 ರಂದು ನಡೆದ ಚಾಲನಾ ಪರೀಕ್ಷೆಗೆ 55 ಅಭ್ಯರ್ಥಿಗಳ ಪೈಕಿ 36 ಅಭ್ಯರ್ಥಿಗಳು ಮಾತ್ರ ಹಾಜರಾಗಿದ್ದು, 33 ಅಭ್ಯರ್ಥಿಗಳು ಮಾತ್ರ ಚಾಲನಾ ಪರೀಕ್ಷೆಗೆ ಅರ್ಹತೆ ಗಳಿಸಿರುತ್ತಾರೆ. ಉಲ್ಲೇಖ(4)ರಂತೆ ಸದರಿ ಸಂಸ್ಥೆಯವರು 33 ಅಭ್ಯರ್ಥಿಗಳಿಗೆ ಚಾಲನಾ ಪರೀಕ್ಷೆಯಲ್ಲಿ ನೀಡಿರುವ ಅಂಕಗಳ ಆಧಾರದ ಮೇಲೆ ಗರಿಷ್ಠ ಅಂಕ ಪಡೆದ ಅಭ್ಯರ್ಥಿಗಳನ್ನು ಅನುಕ್ರಮವಾಗಿ ಪಟ್ಟಿ ಮಾಡಿ, ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಅರ್ಹ ಅಭ್ಯರ್ಥಿಗಳನ್ನು ಗುತ್ತಿಗೆ
~~~~~~

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
KARNATAKA STATE TOURISM DEVELOPMENT CORPORATION LTD.
(ಕರ್ನಾಟಕ ಸರ್ಕಾರದ ಒಂದು ಉದ್ಯಮ) (A Govt. of Karnataka Undertaking)

ಕಾರ್ಯನಿರ್ವಾಹಕ ಕಛೇರಿ : ನೆಲಮಹಡಿ, ಬಿ.ಎಂ.ಟಿ.ಸಿ. ಯಶವಂತಪುರ, ಟಿ.ಟಿ.ಎಂ.ಸಿ. - ಬಸ್ ನಿಲ್ದಾಣ, ಯಶವಂತಪುರ ವೃತ್ತ ಬೆಂಗಳೂರು - 560 022.

Corporate Office : Ground Floor, B.M.T.C. Yeshwanthpur, T.T.M.C - Bus Stand, Yeshwanthpur Circle, Bangalore - 560 022.



ನೇಮಕಾತಿಗೆ ಪರಿಗಣಿಸಲಾಗಿರುತ್ತದೆ. ಅದರಂತೆ, ಅಭ್ಯರ್ಥಿಗಳು ಗಳಿಸಿರುವ ಅಂಕಗಳ ಆಧಾರದ ಮೇಲೆ ಗರಿಷ್ಠ ಅಂಕಗಳನ್ನು ಪಡೆದ 10 ಅಭ್ಯರ್ಥಿಗಳನ್ನು ಪರಿಗಣಿಸಿ, ನಂತರದ ಕ್ರಮಾಂಕದಲ್ಲಿರುವ 10 ಅಭ್ಯರ್ಥಿಗಳನ್ನು ಕಾಯ್ದಿರಿಸಲಾಗಿದೆ. ಕಾಯ್ದಿರಿಸಲಾದ ಅಭ್ಯರ್ಥಿಗಳ ವಿವರವನ್ನು ಅನುಬಂಧ-1 ರಲ್ಲಿ ನಮೂದಿಸಲಾಗಿದೆ. ಈ ಕೆಳಕಂಡ ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಇ-ಮೇಲ್ ಹಾಗೂ ದೂರವಾಣಿ ಮೂಲಕ ಸಂದೇಶ ನೀಡಲಾಗುವುದು.

| ಮುಖ್ಯಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ವಿವರ | | | |
|---|---|---|---|
| ಕ್ರ.ಸಂ | ಅಭ್ಯರ್ಥಿಯ ಹೆಸರು | ಅಭ್ಯರ್ಥಿಯ ತಂದೆಯ ಹೆಸರು | ಹುಟ್ಟಿದ ದಿನಾಂಕ |
| 1 | ತುಕಾರಾಮ್ | ಮಲ್ಲಿನಾಥ್ | 02.09.1991 |
| 2 | ಶ್ರೀಕಾಂತ. ಕೆ | ಕುಳ್ಳೇಗೌಡ | 27.10.1986 |
| 3 | ಚಂದ್ರಶೇಖರ ಇಟಗಿ | ಶ್ರೀಶೈಲಪ್ಪ ಇಟಗಿ | 02.12.1993 |
| 4 | ಮಹಾಂತೇಶ್ ಪೂಜಾರಿ | ಕಲ್ಲಯ್ಯ | 06.10.1985 |
| 5 | ಗಿರೀಶ. ಕೆ | ಕಾಳಪ್ಪ | 29.04.1989 |
| 6 | ಎಂ.ವಿ ಪ್ರಶಾಂತ್ | ಎಂ.ಎಸ್ ವೀರ ಭದ್ರಯ್ಯ | 14.01.1988 |
| 7 | ರಘು ಕೆ.ಎಂ | ಮಂಜೇಗೌಡ | 12.04.1990 |
| 8 | ಮಲ್ಲಪ್ಪ ಬೇವಿನಮಟ್ಟಿ | ಬಸಪ್ಪ | 10.08.1988 |
| 9 | ಮಂಜುನಾಥ್ ಬಾಯಹಟ್ಟಿ | ಶಂಕರಪ್ಪ | 07.08.1987 |
| 10 | ಮಧುಮನ್ನರ ಬಸವರಾಜು | ಮಧುಮನ್ನರ ಬುಲ್ಲಪ್ಪ | 01.07.1988 |

(ಕುಮಾರ್ ಪುಷ್ಕರ್, ಭಾ.ಅ.ಸೇ)
ವ್ಯವಸ್ಥಾಪಕ ನಿರ್ದೇಶಕರು

ಗೆ:

ಎಲ್ಲಾ ವಿಭಾಗದ ಅಧಿಕಾರಿಗಳ ಮಾಹಿತಿಗಾಗಿ.

ಪ್ರತಿಗಳು:

1. ಕೇಂದ್ರ ಕಛೇರಿಯ ಸೂಚನಾ ಫಲಕಕ್ಕೆ ಹಾಕಲು ಸೂಚಿಸಿದೆ.
2. ನಿಗಮದ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.

# ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ

ಕಾರ್ಯನಿರ್ವಾಹಕ ಕಛೇರಿ, ಯಶವಂತಪುರ ಟಿ.ಟಿ.ಎಂ.ಸಿ, ಬಿ.ಎಂ.ಟಿ.ಸಿ ಬಸ್ ನಿಲ್ದಾಣ, ಯಶವಂತಪುರ ವೃತ್ತ, ಬೆಂಗಳೂರು-560022

## ಅನುಬಂಧ-1

ದಿನಾಂಕ: 06.01.2018 ರ ಅಧಿಸೂಚನೆಯಂತೆ ದಿನಾಂಕ: 18.01.2018 ರಂದು ನಡೆದ ನೇರಸಂದರ್ಶನ ಹಾಗೂ ದಿನಾಂಕ:03.03.2018 ರಂದು ನಡೆದ ಚಾಲನಾ ಪರೀಕ್ಷೆಯಲ್ಲಿ ಪಡೆದ ಮೌಲ್ಯಾಂಕಗಳ ಆಧಾರದ ಮೇಲೆ ಚಾಲಕ ಹುದ್ದೆಗಳ ಕಾಯ್ದಿರಿಸಿದ **(Waiting List)** ಅಭ್ಯರ್ಥಿಗಳ ಪಟ್ಟಿ

| ಕ್ರ.ಸಂ | ಅಭ್ಯರ್ಥಿಯ ಹೆಸರು | ಅಭ್ಯರ್ಥಿಯ ತಂದೆಯ ಹೆಸರು | ಹುಟ್ಟಿದ ದಿನಾಂಕ |
|---|---|---|---|
| 1 | ಶ್ರೀನಿವಾಸ | ಕಾಳೇಗೌಡ | 26.01.1993 |
| 2 | ತೇಜೇಂದ್ರ ಪ್ರಸಾದ್ ಆರ್.ಎಂ | ಮರಿರಾಜು | 23.07.1988 |
| 3 | ವೆಂಕಟೇಶ. ಜಿ | ಗಜೇಂದ್ರ | 18.01.1989 |
| 4 | ರಮೇಶ ಡಿ.ಸಿ | ಚಂದ್ರಪ್ಪ | 10.08.1987 |
| 5 | ಹಿರೇಮಠ್ ಜಿ.ಜಿ | ಗುರುಸಂಗಯ್ಯ | 06.04.1984 |
| 6 | ಶ್ರೀಗಂಗೇಗೌಡ ಡಿ.ಕೆ | ಕೃಷ್ಣಪ್ಪ | 15.06.1986 |
| 7 | ರವಿ ಕೂಡ್ಲಿಗಿ | ಮಂಜುನಾಥ್ | 12.07.1993 |
| 8 | ಉದಯ್ ಎಸ್ | ಸಿದ್ದರಾಜಯ್ಯ | 10.08.1983 |
| 9 | ಮೋಹನ | ಚನ್ನಬಸಪ್ಪ | 18.08.1989 |
| 10 | ವಿನೋದ ಡಿಸೋಜಾ | ಮೋರಿಸ್ ಡಿಸೋಜಾ | 27.11.1989 |

(ಕುಮಾರ್ ಪುಷ್ಕರ್, ಭಾ.ಅ.ಸೇ)
ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಪ್ರ.ಅ.ನಿ